ಓ ಎಸ್ ನಂ 577/2014

ಡಿ. ಡಬ್ಲ್ಯೂ ಃ 4

ದಿಃ 18.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಬಿ ಎಸ್ ಎಸ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ವಂಶವೃಕ್ಷದ ಪ್ರಮಾಣಪತ್ರವನ್ನು ಕುಟುಂಬದ ಕೊಟ್ಟಿದ್ದು ಅದನ್ನು ನಿ ಡಿ 10 ಎಂದು , ಸ.ನಂ. 4/8 ರ 4 ಕೈ ಬರಹದ ಪಹಣಿಗಳನ್ನು ಒಟ್ಟಾಗಿ ನಿ ಡಿ 11 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದ ಃ

ದಾವಾ ಸ್ವತ್ತಿನಲ್ಲಿ ನನ್ನ ತಂದೆಗೆ ಬರಬೇಕಾದ ಭಾಗದಲ್ಲಿ ನನಗೂ ಭಾಗ ಬರಬೇಕು. ನನ್ನ ತಂದೆಗೆ ಯಾವ್ಯಾವ ಆಸ್ತಿಗಳು ಬರಬೇಕೆಂದು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ನನ್ನ ತಂದೆಗೆ ಬರಬೇಕಾದ ಆಸ್ತಿಗಳು ಎಲ್ಲಿರುತ್ತವೆ ಎಂದು ನನಗೆ ಗೊತ್ತು, ಆದರೆ ಅದರ ನಂಬರ್ ಗಳು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ವಿವರಗಳು ಗೊತ್ತಿಲ್ಲದೇ ಇದ್ದ ಪಕ್ಷದಲ್ಲಿ ನ್ಯಾಯಾಲಯ ನನಗೆ ಹೇಗೆ ಆಸ್ತಿಗಳನ್ನು ವಿಭಜನೆ ಮಾಡಿಕೊಡುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ಜುಂಜಯ್ಯ ಮತ್ತು ರಾಮಲಿಂಗಯ್ಯ ಅಣ್ಣ ತಮ್ಮಂದಿರು ಎಂದರೆ ಸರಿ. ಜುಂಜಯ್ಯ ಮತ್ತು ರಾಮಲಿಂಗಯ್ಯ ನವರ ನಡುವೆ ವಿಭಾಗ ಆಗಿರುವುದಿಲ್ಲ. ಜುಂಜಯ್ಯ ನವರು ರಾಮಲಿಂಗಯ್ಯ ನವರಿಗೆ ಅವರಿಗೆ ಬಂದ ಅರ್ಧ ಭಾಗವನ್ನು ಮಾರಿರುತ್ತಾರೆ ಎಂದರೆ ಸರಿಯಲ್ಲ. ರಾಮಲಿಂಗಯ್ಯ ಮತ್ತು ಶಿವಮ್ಮ ಅಣ್ಣ ತಂಗಿ ಎಂದರೆ ಸರಿ. ಸ.ನಂ. 110/12 ನ್ನು ಜುಂಜಯ್ಯ ನವರು ಮಾರಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ. 136/6 ರಲ್ಲೂ ಜುಂಜಯ್ಯ ನವರು ಅರ್ಧಭಾಗವನ್ನು ಮಾರಿರುತ್ತಾರೆ ಎಂದರೆ ಸರಿಯಲ್ಲ. ನಾನು ರಾಮಲಿಂಗಯ್ಯ ನವರ ಮೇಲೆ ಯಾವುದೇ ಬೇರೆ ದಾವೆಯನ್ನು ಹಾಕಿರುವುದಿಲ್ಲ.

ವಾದಿಗಳಿಗೆ ಮೂರನೇ ಒಂದು ಭಾಗ ಆಸ್ತಿಯಲ್ಲಿ ಭಾಗ ಬರಬೇಕೆಂದರೆ ಸರಿ. ನನಗೆ ರಾಮಲಿಂಗಯ್ಯ ನವರ ಆಸ್ತಿಯಲ್ಲಿ ಭಾಗ ಕೊಡಬೇಕೇ ಹೊರತು ಜುಂಜಯ್ಯ ನವರ ಆಸ್ತಿಯಲ್ಲಿ ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಬಿಟ್ಟು ಬೇರೆ ಯಾವುದೋ ಜಮೀನುಗಳಲ್ಲಿ ಆಸ್ತಿ ಭಾಗ ಬರಬೇಕು, ಅದರ ಬಗ್ಗೆ ನಾನು ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ದಾವಾ ಸ್ವತ್ತುಗಳ ದಸ್ತಾವೇಜು ಪ್ರತಿವಾದಿಗಳ ಹತ್ತಿರ ಇರುತ್ತದೆ ಎಂದು ನೋಟೀಸ್ ನೀಡಿದ ನಂತರ ನನಗೆ ಗೊತ್ತಾಗಿರುತ್ತದೆ. ಪ್ರತಿವಾದಿಗಳು ಮತ್ತು ವಾದಿಗಳು ನನಗೆ ಯಾವ ರೀತಿ ಮೋಸ ಮಾಡಿರುತ್ತಾರೆ ಎಂದರೆ ಸಾಕ್ಷಿ ಮೋಸ ಯಾವ ರೀತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದೊಡ್ಡೇರಿ ಗ್ರಾಮದ ಸ.ನಂ. 4 ಎಷ್ಟು ವಿಸ್ತೀರ್ಣ ಮತ್ತು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ನನಗೆ ಮೋಸ ಮಾಡಿ ಯಾವ ಜಮೀನನ್ನು ಯಾರಿಗೆ ಮಾರಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಹಾಕಿದ 7 ವರ್ಷಗಳಾದರೂ ಈ ದಾವೆಯ ಬಗ್ಗೆ ವಿಚಾರ ಗೊತ್ತಿರುವುದಿಲ್ಲವೇ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ನನಗೆ ನೋಟೀಸ್ ಬಂದ ಮೇಲೆ ಗೊತ್ತಾಗಿರುತ್ತದೆ. ಯಾರ ಮುಖಾಂತರ ನನಗೆ ನೋಟೀಸ್ ಬಂದಿರುತ್ತದೆ ಎಂದು ಕೇಳಿದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯವರು ಪ್ರತಿವಾದಿಗಳ ಸ್ವತ್ತಿನಲ್ಲಿ ಅರ್ಧ ಭಾಗ ಕೇಳುತಿದ್ದು, ನಾನು ಮೂರನೇ ಒಂದು ಭಾಗ ಕೇಳುತ್ತಿದ್ದು, ಯಾವುದು ಸತ್ಯವಾಗಿರುತ್ತದೆ ಎಂದರೆ ಸಾಕ್ಷಿ ನಮ್ಮ ತಂದೆಯ ಆಸ್ತಿಯಲ್ಲಿ ನನಗೆ ಮೂರನೇ ಒಂದು ಭಾಗ ಬರಬೇಕೆಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಎಷ್ಟು ಜನ ಇರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

ನನಗೆ ಮದುವೆಯಾಗಿ 60 ವರ್ಷಗಳ ಮೇಲೆ ಆಗಿರುತ್ತದೆ. ನಾನು ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ಬೆಂಗಳೂರಿನಲ್ಲಿ ನಾನು ನನ್ನ ಮಗನ ಜೊತೆ ವಾಸವಾಗಿರುತ್ತೇನೆ. ದಾವಾ ಆಸ್ತಿಗಳ ಖಾತೆಗಳು ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಅವರ ಪಾಲಿನ ದಾವಾ ಆಸ್ತಿಯನ್ನು ಕ್ರಯಪತ್ರದ ಮುಖಾಂತರ ಖರೀದಿ ಮಾಡಿ ಅವರ ಹೆಸರಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ.

ವಾದಿ ತಹಶೀಲ್ದಾರ್ ರವರಿಗೆ ಖಾತೆ ಬದಲಾವಣೆ ಮಾಡಬಾರದು ಎಂದು ನೀಡಿರುವ ಅರ್ಜಿಯ ಬಗ್ಗೆ ನನಗೆ ಯಾರು ತಿಳಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇರುತ್ತದೆ ಎಂದು ಪ್ರತಿವಾದಿಗಳನ್ನು ನಾನು  ಕೇಳಿರುವುದಿಲ್ಲ. ಆದರೆ ನೋಟೀಸ್ ಬಂದ ಮೇಲೆ ಆಸ್ತಿಯಲಿ ಭಾಗ ಇರುತ್ತದೆ ಎಂದು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ, ವಾದಿಗಳ ಮಾತು ಕೇಳಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನನಗೆ ಆಸ್ತಿಯಲ್ಲಿ ಹಕ್ಕು ಇದ್ದಿದ್ದರೆ ನಾನು ಪ್ರತ್ಯೇಕ ದಾವೆಯನ್ನು ಹೂಡಬೇಕಾಗಿತ್ತು ಎಂದರೆ ಸರಿಯಲ್ಲ.

ನಾನು ನಮ್ಮ ಕುಟುಂಬದ ವಂಶವೃಕ್ಷವನ್ನು ನೀಡಿರುತ್ತೇನೆ. ವಂಶವೃಕ್ಷದಲ್ಲಿ ತೋರಿಸಲಾಗಿರುವ ವ್ಯಕ್ತಿಗಳಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನಗೆ ಯಾವುದೆ ಹಕ್ಕು ಇಲ್ಲದೇ ಇದ್ದರೂ ನಾನು ಅರ್ಜಿದಾರರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಪ್ರತಿವಾದಿ 6 ರವರ ಪರ ಶ್ರೀ ಎನ್ ಎಲ್ ವಕೀಲರಿಂದ ಃ**

ನಾನು ರೇವಯ್ಯ  ನವರ ಮಗಳೆಂದು ಹೇಳಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನೀಡಿರುತ್ತೇನೆ. ರಾಮಲಿಂಗಯ್ಯ ನವರ ಮಗಳು ನೇತ್ರಾವತಿ ನನ್ನ ಅಣ್ಣನ ಮಗಳು.  ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ರೇವಯ್ಯ ಮತ್ತು ಬೊಮ್ಮಯ್ಯ ನವರು ಯಾರು ಎಂದು ನನಗೆ ಈಗ ಹೇಳಲಾಗಿವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಎಲ್ಲ ವ್ಯಕ್ತಿಗಳ ಹೆಸರು ನಮೂದಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳನ್ನು ಅಂದರೆ ನಿಡಿ 11 ನ್ನು ಎಲ್ಲಿಂದ ಪಡೆದಿರುತ್ತೇನೆ ಎಂದರೆ ಗೊತ್ತಿಲ್ಲ. ಪಹಣಿಗಳನ್ನು ನನಗೆ ಕೊಡಲು ಯಾವುದೇ ಅಭ್ಯಂತರ ಇರುವುದಿಲ್ಲ. ದಾವಾ ಸ್ವತ್ತುಗಳು ರಾಮಲಿಂಗಯ್ಯ ನವರ ಸ್ವಯಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ಆ ರೀತಿ ಸ್ವಯಾರ್ಜಿತ ಸಂಪಾದನೆ ಮಾಡಿದ ನಂತರ ರಾಮಲಿಂಗಯ್ಯ ನವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು  ದಾವಾ ಸ್ವತ್ತಿಗೆ ಯಾವ ವರ್ಷದಲ್ಲಿ ಈ ಹಿಂದೆ ಭೇಟಿ ನೀಡಿದ್ದೆ ಎಂದು ಹೇಳಲಾಗುವುದಿಲ್ಲ. ದಾವಾ ಸ್ವತ್ತುಗಳಲ್ಲಿ ಈ ದಿನವೂ ರಾಮಲಿಂಗಯ್ಯ ಮತ್ತು ಅವರ ಮಕ್ಕಳು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ, ನನ್ನ ತಂದೆಗೆ ಸಂಬಂಧಪಟ್ಟ

ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ತೀರಿಕೊಂಡು 40 ವರ್ಷಗಳಾಗಿರಬಹುದು. ನನ್ನ ತಂದೆ ತೀರಿಕೊಂಡ ನಂತರ ನನ್ನ ಅಣ್ಣ ಮನೆಯನ್ನು ಮುಖ್ಯಸ್ಥರಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಅದೇ ರೀತಿ ನನ್ನ ಮದುವೆಯ ಕಾರ್ಯಗಳನ್ನು ನನ್ನ ಅಣ್ಣನೇ ಮಾಡಿರುತ್ತಾನೆ ಎಂದರೆ ಸರಿ. ನನ್ನ ಪ್ರಮಾಣಪತ್ರದಲ್ಲಿ ಹಾಗೂ ಪ್ರತಿವಾದಪತ್ರದಲ್ಲಿ ನನಗೆ ಯಾವ ಸ್ವತ್ತಿನಲ್ಲಿ ಭಾಗ ಬರಬೇಕು ಮತ್ತು ಬರಬಾರದು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಸ್ವತ್ತುಗಳು ಎಂದು ಹೇಳಲು ದಾಖಲಾತಿಗಳನ್ನು ನಾನು ಕಳೆದ ಬಾರಿ ಯಾವಾಗ ನೋಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ದಾಖಲಾತಿಗಳು ರಾಮಲಿಂಗಯ್ಯ ನವರ ಹತ್ತಿರ ಇರುವುದರ ಬಗ್ಗೆ ಮಾಹಿತಿ ಇರುವುದಿಲ್ಲ.

ನನ್ನ ಪ್ರಮಾಣಪತ್ರದಲ್ಲಿ ಇರುವ ವಿಚಾರವನ್ನು ನಮ್ಮ ವಕೀಲರಿಗೆ ನಾನೇ ಹೇಳಿ ಬರೆಯಿಸಿರುತ್ತೇನೆ. 1985 ರಿಂದ ರಾಮಲಿಂಗಯ್ಯ ನವರು ಜುಂಜಯ್ಯ ನವರಿಂದ ಆಸ್ತಿ ಖರೀದಿ ಮಾಡಿ ಈ ದಿನವರೆವಿಗೂ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಮೂರನೇ ಒಂದು ಭಾಗ ಯಾವ ಆಸ್ತಿಯಲ್ಲಿ ಬರಬೇಕೆಂದು ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಜಂಟಿ ಸ್ವಾಧೀನದಲ್ಲಿ ಇರುವುದನ್ನು ತೋರಿಸಲು ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಮ್ಮ ಅಣ್ಣ ರಾಮಲಿಂಗಯ್ಯ ನವರ ಹತ್ತಿರ ಬರಬೇಕಾದ ಹಣವನ್ನು ಪಡೆದು ನನಗೆ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ, ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲಿಗಾಗಿ ವಾದಿ ಪರ ವಕೀಲರಾದ ಎ ಎಸ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**